# ಉಟ್ಟು ನೋಡಿ ಬುಟ್ಟಾ ಸೀರೆ!





**ರೇಷ್ಮೆ ಸೀರೆಯಲ್ಲಿ, ಅದರಲ್ಲೂ ಬನಾರಸ್ ಸೀರೆಯಲ್ಲಿ ಬುಟ್ಟಾ ಸೀರೆಗಳದ್ದು ವಿಶೇಷ ಆಕರ್ಷಣೆ. ಶತಶತಮಾನಗಳ ಇತಿಹಾಸವಿರುವ ಬನಾರಸ್ ಸೀರೆ, ಯಾವ ಕಾಲಕ್ಕೂ ಸಲ್ಲುವ 'ಎವರ್‌ಗ್ರೀನ್ ರಾಣಿ' ಎಂದೇ ಫ್ಯಾಷನ್‌ಲೋಕದಲ್ಲಿ ಬಿಂಬಿತವಾಗುತ್ತಿದೆ.**

**■ ಆಶಾ ಎಸ್. ಕುಲಕರ್ಣಿ**

ಸೀರೆಯಲ್ಲಿ ವೈವಿಧ್ಯಕ್ಕೆ ಕೊನೆ ಎನ್ನುವುದೇ ಇಲ್ಲ. ದಿನನಿತ್ಯ ಹೊಸ ಹೊಸ ಆಧುನಿಕ ಉಡುಪುಗಳು ಅಪ್‌ಡೇಟ್ ಆಗುತ್ತಿದ್ದರೂ ನಮ್ಮ ಸಾಂಪ್ರದಾಯಿಕ ಸೀರೆ ತನ್ನ ಬೇಡಿಕೆಯನ್ನು ಕಳೆದುಕೊಳ್ಳುವುದೇ ಇಲ್ಲ. ಇನ್ನಷ್ಟು ನವ ನವೀನ ವಿನ್ಯಾಸ, ಹೊಸ ರೂಪ ಪಡೆದು ತನ್ನ ಸ್ಥಾನ ಭದ್ರಪಡಿಸಿಕೊಳ್ಳುತ್ತಲೇ ಇದೆ.

ವಸ್ತ್ರವಿನ್ಯಾಸಕಾರರು ಫ್ಯಾಷನ್‌ಪ್ರಿಯರಿಗೋಸ್ಕರ ಹೊಸ ಪ್ರಯೋಗ ಮಾಡಲು ಈ ತರಹೇವಾರಿ ಸೀರೆಗಳನ್ನೇ ಆಯ್ದುಕೊಳ್ಳುತ್ತಿದ್ದಾರೆ. ಸೀರೆ ಒಂದು ಕಚ್ಚಾ ವಸ್ತು ಇದ್ದ ಹಾಗೆ.. ಅದರ ಮೇಲಿರುವ ಪ್ರಿಂಟ್, ಬಾರ್ಡರ್, ಸೆರಗು... ಹೀಗೆ ವಿವಿಧ ಭಾಗಗಳನ್ನು ಆಧಾರವಾಗಿಟ್ಟುಕೊಂಡು ನಾನಾ ರೀತಿಯ ಫ್ಯಾಷನ್ ವಿನ್ಯಾಸ ಮಾಡಬಹುದು. ಇದೀಗ ಫ್ಯಾಷನ್‌ಪ್ರಿಯರ ಹಾಟ್ ಫೇವರೆಟ್ ಎಂದರೆ ಬನಾರಸ್ ಸೀರೆಗಳಿಂದ ತಯಾರಿಸಿದ ಬುಟ್ಟಾ ಸೀರೆಗಳು.

ಬುಟ್ಟಾ ಸೀರೆಗಳು ನೋಡಲು ಚಂದ. ಬನಾರಸ್ ಸೀರೆ ವೈವಿಧ್ಯದಲ್ಲಿ ಬುಟ್ಟಾ ಸೀರೆಗಳ ಚೆಲುವು ಮತ್ತಷ್ಟು ಹೆಚ್ಚು. ಅಲ್ಲದೆ ಬನಾರಸ್ ಸೀರೆಗಳ ಇತಿಹಾಸವು ಶತಶತಮಾನಗಳಷ್ಟು ಹಿಂದಿನದು ಎಂದು ಹೇಳಲಾಗುತ್ತದೆ. ಉತ್ತರ ಪ್ರದೇಶದ ಬನಾರಸ್ ಅಥವಾ ಕಾಶಿ ಎಂದೂ ಕರೆಯಲ್ಪಡುವ ವಾರಾಣಸಿಯ ಶ್ರೀಮಂತ ಸಾಂಸ್ಕೃತಿಕ ಪರಂಪರೆಯಲ್ಲಿ ಸೀರೆಗಳ ಮೂಲ ಇತಿಹಾಸವಿದೆ. ಅದರಲ್ಲೂ ಮೊಘಲ್ ಅವಧಿಯಲ್ಲಿ, ಸುಮಾರು 14 ನೇ ಶತಮಾನದಲ್ಲಿ ಈ ಬನಾರಸಿ ಸೀರೆಗಳ ಶ್ರೀಮಂತಿಕೆ ಎಲ್ಲೆಡೆ ಪರಿಚಯವಾಗುತ್ತ ಹೋಗುತ್ತದೆ. ವಾರಾಣಸಿ, ರೇಷ್ಮೆ ಉತ್ಪಾದನೆ ಮತ್ತು ನೇಯ್ಗೆಯ ಪ್ರಮುಖ ಕೇಂದ್ರವಾಯಿತು. ನಂತರ ಬ್ರಿಟಿಷರ ವಸಾಹತುಶಾಹಿ ಅವಧಿಯಲ್ಲಿ ಬನಾರಸ್ ಸೀರೆಗಳು ಮತ್ತಷ್ಟು ಪ್ರಾಮುಖ್ಯ ಪಡೆದುಕೊಂಡವು. ನಂತರ ಭಾರತೀಯ ರಾಜಮನೆತನ ಮತ್ತು ಶ್ರೀಮಂತರಿಂದ ಅಲಂಕರಿಸಲ್ಪಟ್ಟ ಬನಾರಸ್ ಸೀರೆಗಳು ಅವರ ಸ್ಥಾನಮಾನವನ್ನು ಮತ್ತಷ್ಟು ಹೆಚ್ಚಿಸಿದವು.

ಇವು ಪ್ರತಿಷ್ಠೆ ಮತ್ತು ಸೊಬಗಿನ ಸಂಕೇತವಾಗಿದ್ದವು. ಈ ಸೀರೆಗಳನ್ನು ಸಾಂಪ್ರದಾಯಿಕವಾಗಿ ಶುದ್ಧ ರೇಷ್ಮೆ ಎಳೆಗಳನ್ನು ಬಳಸಿ ಕೈಯಿಂದ ನೇಯಲಾಗುತ್ತದೆ. ಇದರ ಡಿಸೈನ್‌ಗಳನ್ನು ಝರಿಯಿಂದ ರಚಿಸಲಾಗುತ್ತದೆ. ಇದನ್ನು ಸಾಮಾನ್ಯವಾಗಿ ಚಿನ್ನ ಅಥವಾ ಬೆಳ್ಳಿಯಿಂದ ತಯಾರಿಸಲಾಗುತ್ತದೆ. ಚಿನ್ನ ಮತ್ತು ಬೆಳ್ಳಿಯ ಎಳೆಗಳನ್ನು ಬಳಸಿ ಸಂಕೀರ್ಣ ವಿನ್ಯಾಸಗಳೊಂದಿಗೆ ಬ್ರೊಕೇಡ್‌ಗಳನ್ನು ನೇಯುವುದು ಬನಾರಸ್‌ನ ವಿಶೇಷತೆಯಾಗಿದೆ. ಇದು ಪ್ರಕೃತಿ, ಸಸ್ಯ, ಪ್ರಾಣಿ, ನಿಸರ್ಗ, ಮೊಘಲ್ ಕಲೆ ಮತ್ತು ವಿವಿಧ ವಿನ್ಯಾಸಗಳಿಂದ ಸ್ಫೂರ್ತಿ ಪಡೆದಿದೆ.

ಫ್ಯಾಷನ್ ಲೋಕ ವಿಸ್ತರಿಸಿದಂತೆ ಸಾಂಪ್ರದಾಯಿಕ ಬನಾರಸ್ ಸೀರೆ ಸಾಕಷ್ಟು ಮಾರ್ಪಾಡುಗಳನ್ನೂ ಪಡೆದುಕೊಂಡಿದೆ. ಬುಟ್ಟಾಗಳಲ್ಲೂ ಜರಿ ಬುಟ್ಟಾ, ಕಲರ್ ಬುಟ್ಟಾ, ವಿವಿಧ ಶೇಪ್‌ನ ಬುಟ್ಟಾಗಳು ಸೀರೆಯ ಸೊಬಗನ್ನು ಇಮ್ಮಡಿಸಲು ಸಹಕಾರಿಯಾಗಿವೆ.

ಹಿಂದಿನ ಕಾಲದಲ್ಲಿ ಬನಾರಸ್ ಸೀರೆಗಳ ಬಳಕೆ ತುಂಬ ಹೆಚ್ಚಾಗಿತ್ತು. ಕೆಲವು ಹೆಣ್ಣು ಮಕ್ಕಳಿಗೆ ಬನಾರಸ್ ಸೀರೆ ಅಜ್ಜಿ, ಅಮ್ಮನಿಂದ ಬಂದ ಬಳುವಳಿಯೂ ಆಗಿತ್ತು. ಮದುವೆ ದಿನ ಅಮ್ಮ ಕೊಟ್ಟ ಸೀರೆ, ಧಾರೆ ಸೀರೆ, ಸೀಮಂತದ ಸೀರೆ, ಹಬ್ಬಕ್ಕೆ ಅಣ್ಣ ಕೊಟ್ಟ ಸೀರೆ... ಹೀಗೆ ಬನಾರಸ್